5713, (5815) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ವಿವಿಧ ಹಂತದಲ್ಲಿ ನ್ಯಾಯಾಲಯಗಳೂ ಸೇರಿದಂತೆ ರಾಜ್ಯದಲ್ಲಿರುವ ಒಟ್ಟು ನ್ಯಾಯಾಲಯಗಳ ಸಂಖ್ಯೆ ಎಷ್ಟು;

ಆ) ಈ ನ್ಯಾಯಾಲಯಗಳಲ್ಲಿ ಎಷ್ಟು ನ್ಯಾಯಾಧೀಶರ ಹುದ್ದೆಗಳು ಖಾಲಿ ಇವೆ ಹಾಗೂ ಎಷ್ಟು ವರ್ಷಗಳಿಂದ ಖಾಲಿ ಇವೆ;

ಇ) ಈ ಹುದ್ದೆಗಳನ್ನು ಭರ್ತಿ ಮಾಡಲಿಕ್ಕಿರುವ ತೊಂದರೆಗಳೇನು;

ಈ) ಈ ಹುದ್ದೆಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಉ) ಹೊಸದಾಗಿ ನ್ಯಾಯಾಲಯಗಳನ್ನು ಸ್ಥಾಪನೆ ಮಾಡಲಿಕ್ಕೆ ಸರ್ಕಾರ ನಿರ್ಧರಿಸಲಾಗಿದೆಯೇ;

ಊ) ಹಾಗಾದಲ್ಲಿ ಅದಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಶ್ರೀ ಹೆಚ್. ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

ಅ) 714.

ಆ) 72.ಬೇರೆ ಬೇರೆ ಹುದ್ದೆಗಳು ಬೇರೆ ಬೇರೆ ಅವಧಿಯಿಂದ ಖಾಲಿ ಇವೆ.

ಇ) ನ್ಯಾಯಾಂಗ ವೃಂದದ ಅಧಿಕಾರಿಗಳ ನೇಮಕಾತಿ ನಿಯಮಗಳನ್ನು ತಯಾರಿಸಲಾಗುತ್ತಿದೆ.

ಈ) ಸದರಿ ನಿಯಮಗಳನ್ನು ಪ್ರಕಟಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಉ) ಹೌದು.

ಊ) ಸರ್ಕಾರಿ ಆದೇಶ ಸಂಖ್ಯೆ : ಲಾ 47, ಎಲ್.ಸಿ.ಇ.2005, ದಿನಾಂಕ :23-06-2005 ರಲ್ಲಿ ವಿವಿಧ ದರ್ಜೆಯ 90 ನ್ಯಾಯಾಲಯಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ.

5714, (5816) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಎಷ್ಟು; ಹಾಗೂ ಎಷ್ಟು ವರ್ಷಗಳ ವ್ಯಾಜ್ಯಗಳು ಇವಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಈ ವ್ಯಾಜ್ಯಗಳು ಇದುವರೆಗೂ ಬಾಕಿ ಇರುವ ಕಾರಣಗಳೇನು (ವಿವರ ನೀಡುವುದು);

ಇ) ಪ್ರಕರಣಗಳ ತ್ವರಿತಗತಿಯ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; ವಿವರ ನೀಡುವುದು;

ಶ್ರೀ ಹೆಚ್. ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.

ಅ) ಅರೆ ನ್ಯಾಯಿಕ ಪ್ರಕರಣಗಳನ್ನು ಹೊರತು ಪಡಿಸಿ ದಿನಾಂಕ : 31-05-2005 ರಲ್ಲಿದ್ದಂತೆ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ವಿವರ ಈ ಕೆಳಗಿನಂತಿದೆ.

	ಸಿವಿಲ್	ಕ್ರಿಮಿನಲ್
ಉಚ್ಚ ನ್ಯಾಯಾಲಯ	75,231	10,987
ಜಿಲ್ಲಾ ನ್ಯಾಯಾಲಯ	1,17,027	30,544
ಸಿವಿಲ್ ನ್ಯಾಯಾಲಯ (ಕಿ.ಏ.)	3,21,246	1,60,878
ಸಿವಿಲ್ ನ್ಯಾಯಾಲಯ (ಹಿ.ಏ.)	1,64,130	2,80,562

(ಜಿಲ್ಲಾವಾರು ಮಾಹಿತಿ ಸಧ್ಯಕ್ಕೆ ಲಭ್ಯವಿರುವುದಿಲ್ಲ. ಉಚ್ಚನ್ಯಾಯಾಲಯದಿಂದ ಪಡೆದು ಒದಗಿಸಲಾಗುವುದು).

ಆ) ಇಂತಹ ಪ್ರಕರಣಗಳನ್ನು ನಿರ್ವಹಿಸುವಲ್ಲಿ ನ್ಯಾಯಾಲಯಗಳು ನಿಗದಿತ ವಿಧಾನವನ್ನು ಪಾಲಿಸಬೇಕಾಗುತ್ತದೆ.

ಇ) ಆ ಕುರಿತಂತೆ ರಾಜ್ಯ ಸರ್ಕಾರ : ಉಚ್ಚನ್ಯಾಯಾಲಯ ಈ ಕೆಳಗಿನಂತೆ ಕ್ರಮಕೈಗೊಂಡಿರುತ್ತದೆ.

ಮೊಕದ್ದಮೆಗಳ ತ್ವರಿತ ವಿಲೇವಾರಿಗೆ ಏಳು ಜಿಲ್ಲೆಗಳಲ್ಲಿ ಪೈಲೆಟ್ ಪ್ರಾಜೆಕ್ಟ್ ಯೋಜನೆ ಜಾರಿಗೆ ತರಲಾಗಿದೆ.

ಹಳೆಯ ಪ್ರಕರಣಗಳ ವಿಲೇವಾರಿಗೆ 93 ಶೀಘ್ರಗತಿ ನ್ಯಾಯಾಲಯಗಳನ್ನು ಸೃಜಿಸಲಾಗಿದೆ.

ಅಧೀನ ನ್ಯಾಯಾಲಯಗಳಲ್ಲಿ ಗಣಕೀಕರಣ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ.

ಹಳೆಯ ಪ್ರಕರಣಗಳನ್ನು ಆಧ್ಯತೆ ಮೇಲೆ ವಿಲೇವಾರಿ ಮಾಡುವಂತೆ ಎಲ್ಲಾ ನ್ಯಾಯಲಯಗಳಿಗೆ ಸೂಚಿಸಲಾಗಿದೆ.

ಸಣ್ಣ ಪ್ರಮಾಣದ ಅಪರಾಧಿಗಳಲ್ಲಿ ನ್ಯಾಯಾಂಗ ಬಂಧನಕ್ಕೆ ಒಳಗಾದ ಅಪರಾಧಿಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ತುರ್ತಾಗಿ ವಿಲೇವಾರಿಗೊಳಿಸುವಂತೆ ಎಲ್ಲಾ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳಿಗೆ ಸೂಚಿಸಲಾಗಿದೆ.

ಹಿರಿಯ ನಾಗರೀಕರಿಗೆ ಸಂಬಂಧಿಸಿದ ಪ್ರಕರಣಗಳನ್ನು ಆಧ್ಯತೆ ಮೇಲೆ ವಿಲೇವಾರಿಗೊಳಿಸುವಂತೆ ಎಲ್ಲಾ ನ್ಯಾಯಾಲಯಗಳಿಗೆ ಸೂಚಿಸಲಾಗಿದೆ.

ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರು:ಆಡಳಿತಾತ್ಮಕ ನ್ಯಾಯಾಧೀಶರು ನ್ಯಾಯಾಲದ ಅಧಿಕಾರಿಗಳ ಸಭೆ ನಡೆಸುವ ಮುಖಾಂತರ ಬಾಕಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದರತ್ತ ಹೆಚ್ಚಿನ ಗಮನ ಹರಿಸಿರುತ್ತಾರೆ.

5715, (5818) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, (ಶಿವಾಜಿ ನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರು ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ಕಸ ತ್ಯಾಜ್ಯ ಪ್ರಮಾಣ ಎಷ್ಟು;

ಆ) ಇದನ್ನು ಸಂಗ್ರಹಿಸಲು (ಎಲ್ಲಾ ವಾರ್ಡ್‌ಗಳಲ್ಲಿ) ಯಾವ ವ್ಯವಸ್ಥೆ ಮಾಡಲಾಗಿದೆ ಹಾಗೂ ಇಂತಹ ಕಸವನ್ನು ಎಲ್ಲಿಗೆ ಕಳುಹಿಸಿಕೊಡಲಾಗುತ್ತಿದೆ;

ಇ) ಈ ತ್ಯಾಜ್ಯ ವಸ್ತು ನಿರ್ವಹಣೆಗೆ ಅನುಸರಿಸುವ ಮಾದರಿ ಮಾನದಂಡ ಗಳೇನು;

ಈ) ಆ ಪೈಕಿ ಸಾಫ್ಟ್‌ವೇರ್ ಸಂಸ್ಥೆ ಇತ್ಯಾದಿಗಳಿಂದ ಬರುವ ನಿರುಪಯುಕ್ತ ವಸ್ತುಗಳ ಸಂಗ್ರಹದ ಪ್ರಮಾಣ ಎಷ್ಟು ಹಾಗೂ ಇದನ್ನು ಈಗ ಎಲ್ಲಿ ಸಂಗ್ರಹಿಸಲಾಗಿದೆ?